ಅನುಮಾನ ಹೊರಗೆಡವಿ, ಅದಕ್ಕಾಗಿ ತನಿಖೆ ಮಾಡಲು ನಿಶ್ಚಯಿಸಿದ್ದು, ಸಹಕಾರ ಕೊಡಬೇಕೆಂದು ಕೋರಿದರು. ಹಿಂದಿನ ದಿನವಷ್ಟೇ, ಕಂಪನಿ ಒಂದು ಟೆಂಡರಿಗೆ ಬಿಡ್ ತಯಾರು ಮಾಡಿತ್ತಂತೆ. ಆ ನೆಲೆಯಲ್ಲಿ ಹಠಾತ್ ತನಿಖೆ ಅನಿವಾರ್ಯವೆನ್ನುವುದು ಪಾಲುದಾರರ ಸಮಜಾಯಿಷಿ. ಜೊತೆಗೆ, ಅನ್ಯಥಾ ಭಾವಿಸಬಾರದು, ಇದು ತಮ್ಮ ಅನುಮಾನವನ್ನು ನಿವಾರಿಸುವ ಉದ್ದೇಶದಿಂದ ಮಾತ್ರ, ತಮ್ಮಿಬ್ಬರ ಮೇಲೆ ತಮಗೆ ಯಾವುದೇ ಅಪನಂಬಿಕೆಯೇನೂ ಇಲ್ಲವೆಂದರಂತೆ. ತಾಂತ್ರಿಕವಾಗಿ ಪರಿಣತಿ ಹೊಂದಿಲ್ಲದ ಮಿಥಿಲಾ ಹಾಗೂ ತಮ್ಮನ್ನು ಅವರು ತನಿಖೆಗೊಳಪಡಿಸುವ ಅಗತ್ಯವಿಲ್ಲವೆಂದು ಭಾವಿಸಿದರಂತೆ. ಈ ತನಿಖೆಯನ್ನು ಹಠಾತ್ತಾಗಿ ನಡೆಸಲು ಹಿಂದಿನ ದಿನ ರಾತ್ರಿಯೇ ಪಾಲುದಾರರಿಬ್ಬರೂ ಜಂಟಿಯಾಗಿ ನಿಶ್ಚಯ ಮಾಡಿದ್ದರಂತೆ.

ಪಾಲುದಾರರ ನಿರ್ಧಾರದಿಂದ ತನಗೆ ಬೇಸರವಾದರೂ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ತಾನು ತನಿಖೆಗೆ ಸಹಕರಿಸಲು ಒಪ್ಪಿದೆನೆಂದು ನಾಗರಾಜು ಹೇಳಿದ. ಮೊದಲಿಗೆ ತಮ್ಮಿಬ್ಬರ ಮೊಬೈಲುಗಳನ್ನು ಪಾಲುದಾರರು ಪರಿಶೀಲಿಸಿದರಂತೆ. ಇಬ್ಬರ ಮೊಬೈಲಿನಲ್ಲಿಯೂ ಯಾವುದೇ ಸಂದೇಹಾಸ್ಪದ ಕರೆಗಳು, ಅಥವಾ ಸಂಪರ್ಕ ಮಾಹಿತಿಗಳು ದೊರೆಯಲಿಲ್ಲವಂತೆ. ಕಂಪನಿಯ ಗಣಕಯಂತ್ರಗಳಲ್ಲಿ, ಅನ್ಯ ವೆಬ್‌ಸೈಟು ಅಥವಾ ಮಿಂಚಂಚೆಗಳನ್ನು ತೆರೆಯದಂತೆ ಬ್ಲಾಕ್ ಮಾಡಿರುವುದರಿಂದ, ಬಿಡ್‌ನ್ನು ಇ–ಮೇಲ್ ಮಾಡುವುದು ಸಾಧ್ಯವಿಲ್ಲವಾದ್ದರಿಂದ, ಹಸ್ತಪ್ರತಿಯನ್ನಷ್ಟೇ ಕದ್ದು, ಒಯ್ದಿರಬೇಕು ಎನ್ನುವುದು ಪಾಲುದಾರರ ವಾದ. ಅಥವಾ ಮೊಬೈಲಿನಿಂದ ಅದರ ಫೋಟೊ ತೆಗೆದು ಕಳಿಸಲೂಬಹುದು. ಆದರೆ, ಆ ಬಿಡ್‌ನ ದರಪಟ್ಟಿಯು ಸುಮಾರು ಇಪ್ಪತ್ತೈದು ಪುಟಗಳಷ್ಟಿದ್ದು, ಅದನ್ನು ಮೊಬೈಲಿನಲ್ಲಿ ಫೋಟೊ ತೆಗೆಯುವುದು ಸುಲಭವೇನೂ ಅಲ್ಲ. ಆದರೂ, ನಿನ್ನೆಯ ದಿನದ ಸಿಸಿಟಿವಿ ಫೂಟೇಜನ್ನು ಪರಿಶೀಲಿಸಿ, ತಾವಿಬ್ಬರೂ ಅಂತಹ ಕೃತ್ಯವನ್ನು ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡರಂತೆ. ಇನ್ನುಳಿದ ಒಂದೇ ಸಾಧ್ಯತೆಯೆಂದರೆ, ಹಸ್ತಪ್ರತಿಯನ್ನು ಮನೆಗೆ ಒಯ್ದು, ಅನಂತರ ಅದನ್ನು ಪ್ರತಿಸ್ಪರ್ಧಿ ಕಂಪನಿಗೆ ನೀಡಬಹುದು! ಅದಕ್ಕಾಗಿ, ತಕ್ಷಣವೇ ಇಬ್ಬರ ಮನೆಯನ್ನೂ ಪರೀಕ್ಷಿಸಲು ನಿರ್ಧರಿಸಿದರಂತೆ.

ಇಬ್ಬರ ಮನೆಯೂ ಕಂಪನಿಯ ವಠಾರದೊಳಗೇ ಇರುವುದಂತೆ. ಅದು ಕಂಪನಿ ಕೊಡ ಮಾಡಿದ ಕ್ವಾಟರ್ಸ್. ತನ್ನ ಮನೆಯು ಕಂಪನಿಯ ಮುಖ್ಯ ಕಚೇರಿಗೆ ಸನಿಹದಲ್ಲೇ ಇರುವುದಾದರೂ, ತುಸು ದೂರದಲ್ಲಿರುವ ಸುಬ್ಬಯ್ಯನ ಮನೆಯನ್ನು ಮೊದಲು ತಪಾಸಣೆ ಮಾಡಲು ಪ್ರವೀಣ ಸಲಹೆ ಮಾಡಿದನಂತೆ. ಅದಕ್ಕೆ ಒಂದು ಮುಖ್ಯ ಕಾರಣವೂ ಇತ್ತಂತೆ. ಪ್ರೊಡಕ್ಷನ್ ವಿಭಾಗವನ್ನು ನೋಡಿಕೊಳ್ಳುತ್ತಿದ್ದ ಸುಬ್ಬಯ್ಯನು ಖರೀದಿಯಲ್ಲಿ ಕಮಿಷನ್ ಪಡೆಯುತ್ತಾನೆಂಬ ಆರೋಪವಿತ್ತು. ಅದರ ಬಗ್ಗೆ ನಾಗರಾಜುವಿಗೂ ಅರಿವಿತ್ತಂತೆ. ಹಾಗಾಗಿ ಆತನ ಮೇಲೆಯೇ ಸಹಜವಾಗಿ ಪಾಲುದಾರರಿಗೆ ಮೊದಲ ಅನುಮಾನವಿತ್ತೆಂದು ನಾಗರಾಜು ಹೇಳಿದ.

ಆದರೆ, ಸುಬ್ಬಯ್ಯನ ಮನೆಯಲ್ಲಿ ಏನೂ ಗಮನ ಸೆಳೆಯುವಂತಹದು ಕಾಣಸಿಗಲಿಲ್ಲವಂತೆ. ಸುಬ್ಬಯ್ಯನಿಗೆ ದಾಖಲೆಗಳನ್ನು ಮಾಯ ಮಾಡಲು ಅವಕಾಶ ಸಿಗಬಾರದೆಂಬ ಉದ್ದೇಶದಿಂದ, ಮೊದಲಿಗೆ ಆತನ ಮನೆಗೆ ಹೋದರೂ, ಪ್ರಯೋಜನವೇನೂ ಆಗಲಿಲ್ಲವಂತೆ. ಅನಂತರ ನಾಗರಾಜುವಿನ ಮನೆಯನ್ನು ತಪಾಸಣೆಯನ್ನು ಮಾಡಲಾಯಿತಂತೆ.

"ಸರ್! ನನಗೆ ನನ್ನ ಮನೆಯಲ್ಲೇ ಆಘಾತವಾಯಿತು!! ಸ್ಟಡೀ ರೂಮಿನ ಮೇಜಿನ ಮೇಲೆ ಇದ್ದ ಫೈಲಿನಲ್ಲಿ ಬಿಡ್‌ನ ಕಾಗದಪತ್ರಗಳ ಒಂದು ಪ್ರತಿಯಿತ್ತು!! ನಾನು ಅಂತಹಾ ಹಲ್ಕಾ ಕೆಲಸ ಮಾಡುವವನೇ ಅಲ್ಲ. ಅದು ಅಲ್ಲಿ ಹೇಗೆ ಬಂದಿತೆಂಬುದೇ ಒಗಟು, ಸಾರ್!" ನಾಗರಾಜುವಿನ ದನಿ ಕಂಪಿಸುತ್ತಿತ್ತು.